# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.28195/2015

| | |
|---|---|
| ಸಾಕ್ಷಿದಾರರ ಹೆಸರು : | ಮೊಹಮ್ಮದ ಸಾಧಿಕ್ |
| ತಂದೆಯ ಹೆಸರು : | ಲೇಟ್. ಮೊಹಮ್ಮದ್ ಖಾಸೀಮ್ |
| ವಯಸ್ಸು : | 47 ವರ್ಷ |
| ಉದ್ಯೋಗ : | ಎ.ಎಸ್.ಐ ಎಸ್.ಜಿ. ಪಾಳ್ಯ ಪಿ.ಎಸ್. |
| ವಾಸ : | ಮೈಸೂರು ರೋಡ, ಚಾಮರಾಜಪೇಟೆ , ಬೆಂಗಳೂರು. |

**ದಿನಾಂಕ 05/06/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

ನಾನು 2023 ರಿಂದ ಇಲ್ಲಿಯವರೆಗೆ ಎಸ್.ಜಿ.ಪಾಳ್ಯ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಆರೋಪಿಯ ವಿರುದ್ದ ಉದ್ಘೋಷಣೆ ಮಾಡುವಂತೆ ನ್ಯಾಯಾಲಯದಿಂದ ದಿನಾಂಕ 10/01/2025 ರಂದು ಆದೇಶ ಬಂದಿದ್ದು. ಠಾಣಾಧಿಕಾರಿಯವರು ಉದ್ಘೋಷಣೆ ಮಾಡುವಂತೆ ನನಗೆ ನಿಯೋಜಿಸಿರುತ್ತಾರೆ.

2. ಅದರಂತೆ ದಿನಾಂಕ 20/01/2025 ರಂದು ಆರೋಪಿಯ ವಿಳಾಸಃ ಡಿ.ಜಿ. ಹಳ್ಳಿ, ಮೋದಿ ರಸ್ತೆ, 3ನೇ ಅಡ್ಡ ರಸ್ತೆ, ಬೆಂಗಳೂರು ನಗರ ಎಂಬಲ್ಲಿಗೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ರೆಹಮನ್ ಖಾನ್ ಮತ್ತು ಮುಬಾರಕ್ ಸಾಬ್ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಡಂಗುರ್ ಬಾರಿಸಿ ಘೋಷಿಸಿರುತ್ತೇನೆ , ಸದರಿ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ಡಿ.ಜಿ. ಹಳ್ಳಿ ಪೊಲೀಸ್ ಠಾಣೆಗೆ

ತಿಳಿಸಬೇಕೆಂದು ಸಾರ್ವಜನಿಕವಾಗಿ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಸದರಿ ವಿಳಾಸದ ಗೋಡೆಗೆ ಮತ್ತು ಮಸೀದಿ ಗೋಡೆಗೆ ಹಾಗೂ ಸಾರ್ವಜನಿಕ ಬಸ್ ನಿಲ್ದಾಣದ ಗೋಡೆಗೆ , ಸಾರ್ವಜನಿಕ ಆಸ್ಪತ್ರೆಯ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಮದ್ಯಾಹ್ನ 03.00 ಗಂಟೆಯಿಂದ 04.00 ಗಂಟೆಯವೆರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಆದೇಶ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಆದೇಶವನ್ನು ನಿಪಿ-5 ಎಂದು, ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ಶಿಲ್ಪಾ ಎ.ಜಿ.)

ಮು.ಮ.ದಂ.ನ್ಯಾ.ಬೆಂ.ನಗರ.